ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Friday, the 17th July, 1981/Ashada 26, 1903 S.E.

The House met in the Assembly Chamber, Vidhana Soudha, at Twelve of the Clock.

MR. SPEAKER (Sri K. H. Ranganath) in the Chair.

STARRED QUESTIONS

(To which Oral Answers were given)

Allotment of Siteless people in Channapatna Taluk

49. SRI D. T. RAMU (Channapatna)--Will the Minister for Housing and Urban Development be pleased to state :—

(a) the number of sites allotted so far to the siteless people in Channapatna Taluk ;

(b) the number of cases wherein stay orders have been issued by the High Court at the time of allotment of sites ;

(c) the reasens for the delay in vacating the stay orders ?

SRI DHARAM SINGH NARAYAN SINGH (Minister for Housing and Urban Development)--

(a) 5575 sites have been distributed to the siteless people so far.

(b) Stay orders have been received from High Court in 45 cases at the time of allitment of sites.

(c) Though delay is natural in litigation matters, necessary instructions are being given to the Government Pleader in this regard through the Law Department.

ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ್ನ ಮೊದಲನೆ ಪ್ರಶ್ನೆಗೆ ೫೫೭೭ ನಿವೇಶನಗಳನ್ನು ಹಂಚಲಾಗಿದೆಯೆಂದು ತಿಳಿಸಿದ್ದೀರಿ, ಇಡೀ ತಾಲ್ಲೂಕಿನಲ್ಲಿ ಎಷ್ಟು ಜನ ನಿವೇಶನರಹಿತರಿದ್ದಾರೆಂಬುದನ್ನು ಗುರುತಿಸಿದ್ದೀರಾ ?

ಶ್ರೀ ಧರ್ಮಸಿಂಗ್.—ಸನ್ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದಲ್ಲಿ ೫೫೭೭ ನಿವೇಶನಗಳನ್ನು ಹಂಚಿದ್ದೇವೆ. ಇಡೀ ತಾಲ್ಲೂಕಿನಲ್ಲಿ ನಿವೇಶನರಹಿತರು ಎಷ್ಟು ಜನ ಇದ್ದಾರೆ ಎನ್ನುವ ಬಗ್ಗೆ ಇನ್ನೂ ವರದಿ ಬಂದಿಲ್ಲ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ್ನ ಎರಡನೇ ಪ್ರಶ್ನೆಗೆ ಸುಮಾರು ೪೫ ಪ್ರಕರಣಗಳಲ್ಲಿ ಹೈಕೋರ್ಟಿನಿಂದ ತಡೆಯಾಜ್ಞೆ ಬಂದಿದೆ ಎಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಇವು ತೀರ್ಮಾನ ವಾಗುತ್ತವೆ ?

ಶ್ರೀ ಧರ್ಮಸಿಂಗ್.—೧೦-೩-೧೯೭೬ರಿಂದ ಸುಮಾರು ೪೫ ಕೇಸುಗಳಿಗೆ ತಡೆಯಾಜ್ಞೆ ಬಂದಿದೆ. ನಾವು ಈಗಾಗಲೇ ಸರ್ಕಾರೀ ವಕೀಲರುಗಳಿಗೆ ೧೩-೭-೧೯೮೦ರಲ್ಲಿ ಕಾನೂನು ಇಲಾಖೆಯ ಮೂಲಕ pursue ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಶ್ರೀಡಿ.ಟಿ.ರಾಮು—ಸರ್ಕಾರಿ ವಕೀಲರು ಭೂಮಾಲೀಕರ ಜೊತೆಗೆ ಷಾಮೀಲಾಗಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಅದು ಜನರಲ್ ಆಯಿತು.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ನಿರ್ದಿಷ್ಟವಾದ ಕೇಸುಗಳು ಇದ್ದರೆ ಹೇಳಲಿ. ೧೦-೩-೧೯೭೬ ರಿಂದ ಪೆಂಡಿಂಗ್ ಇವೆ. ೧೩-೭-೧೯೮೦ರಲ್ಲಿ ಮತ್ತೆ ಡೈರೆಕ್ಷನ್ ಕೊಟ್ಟಿದ್ದೇವೆ. ಸರ್ಕಾರಿ ವಕೀಲರು ಭೂ ಮಾಲೀಕರ ಜೊತೆ ಷಾಮೀಲಾಗಿರುವಂತ ಪರದಿ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ರಾಜೂಗೌಡ:—ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಬಿ. ಡಿ. ಓ. ಮತ್ತು ಭೂ ಮಾಲೀಕರು ಷಾಮೀಲಾಗಿರುವಂತ ನಿದರ್ಶನ ಕೊಟ್ಟರೆ, ಅಂಥ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಂಥ ಪ್ರಕರಣಗಳು ಗಮನಕ್ಕೆ ಬಂದಾಗ ಸಸ್ಪೆಂಡ್ ಮಾಡಿದ್ದೇವೆ. ನಿರ್ದಿಷ್ಟವಾದ ಪ್ರಕರಣಗಳನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕಾನೂನನ್ನು ಸೂಕ್ತವಾಗಿ ಮಾರ್ಪಾಟು ಮಾಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಆಗಿದೆಯೆ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಗಮನಿಸಲಾಗುವುದು.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಕಳೆದ ಆರು ತಿಂಗಳಿಂದ ತಡೆಯಾಜ್ಞೆ ಬಂದಂತ ೪೫ ಕೇಸು ಗಳಲ್ಲಿ ಎಷ್ಟು ತೀರ್ಮಾನವಾಗಿವೆ ?

ಶ್ರೀ ಧರ್ಮಸಿಂಗ್.—ಎಲ್ಲಾ ಕೇಸುಗಳು ಹಾಗೆ ಇವೆ, ಇವತ್ತು ಕೂಡ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ.